

# ಖುಷಿ 'ವೆಬ್' ಕಥನ

ಒಟಿಟಿಯಲ್ಲಿ ಬೇರೆ ಭಾಷೆಗಳ ಸಿನಿಮಾಗಳಿಗೆ ಸಿಕ್ಕಷ್ಟು ಆದ್ಯತೆ ಕನ್ನಡದ ಸಿನಿಮಾಗಳಿಗೆ ಸಿಗುತ್ತಿಲ್ಲ ಎಂಬ ಅಸಮಾಧಾನ ಇದ್ದೇ ಇದೆ. ಈ ಅಸಮಾಧಾನದ ನಡುವೆ 'ಅಯ್ಯನ ಮನೆ' ವೆಬ್‌ಸರಣಿ ಚಿಕ್ಕದೊಂದು ಭರವಸೆ ಮೂಡಿಸಿದೆ ಎಂದಿದ್ದಾರೆ ನಟಿ ಖುಷಿ ರವಿ.

ಈಚೆಗೆ ವೆಬ್‌ಸರಣಿಯ ಹೊಸ ಮಾಧ್ಯಮದಲ್ಲಿ ಅನುಭವ ಗಿಟ್ಟಿಸಿಕೊಂಡಿರುವ ನಟಿ ಖುಷಿ ರವಿ, 'ಒಟಿಟಿಯಲ್ಲಿ ಈವರೆಗೂ ಕನ್ನಡ ಸಿನಿಮಾರಂಗವನ್ನು ಸೈಡ್‌ಲೈನ್ ಮಾಡಲಾಗಿದೆ. ಇದು ಬದಲಾಗಬೇಕು. ಒಟಿಟಿಯಲ್ಲಿ ಕನ್ನಡ ಸಿನಿಮಾಗಳನ್ನು ಏಕೆ ನಿರಾಕರಣೆ ಮಾಡಲಾಗುತ್ತದೆ ಎಂಬ ಕುರಿತು ಯಾರಿಂದಲೂ ಸ್ಪಷ್ಟ ಮಾಹಿತಿ ಇಲ್ಲ. ಕನ್ನಡ ಕಂಟೆಂಟ್‌ನಲ್ಲಿ ಪ್ಯಾನ್ ಇಂಡಿಯಾ ಅಪೀಲ್ ಅಥವಾ ಸ್ಕೇಲ್ ಕೊರತೆಯಿದೆ ಎಂದು ಕೆಲವು ಮಂದಿ ಹೇಳಿದರೆ, ಪೇಮೆಂಟ್ ಮಾಡೆಲ್ ಬಗ್ಗೆ ಕೆಲವರು ಮಾತನಾಡುತ್ತಾರೆ. ಆದರೆ ಯಾರಿಂದಲೂ ಸ್ಪಷ್ಟ ಉತ್ತರ ಸಿಗುವುದಿಲ್ಲ. ಈ ನಡೆ, ನಾವು ಸೈಡ್‌ಲೈನ್ ಆಗುತ್ತಿದ್ದೇವಾ ಎಂಬ ಭಾವ ತರುತ್ತದೆ. ಈ ದೃಷ್ಟಿಕೋನ ಬದಲಾಗಬೇಕಿದೆ' ಎಂದು ಹೇಳಿದ್ದಾರೆ.

'ಟೀವಿ ಪ್ರೇಕ್ಷಕರು ಒಟಿಟಿಗೆ ಬರುವುದಿಲ್ಲ ಎಂಬ ಊಹೆ ಇದೆ. ಇದನ್ನು ನಾನು ಒಪ್ಪುವುದಿಲ್ಲ. ಕಥೆಯನ್ನು ಯಾವ ರೀತಿ ಕಟ್ಟುತ್ತೇವೆ ಎಂಬುದರ ಮೇಲೆ ಯಶಸ್ಸು ಅವಲಂಬಿತ. ಕಂಟೆಂಟ್ ಚೆನ್ನಾಗಿದ್ದರೆ, ಪ್ರೇಕ್ಷಕರು ವೇದಿಕೆ ಯಾವುದಿದ್ದರೂ ನೋಡುತ್ತಾರೆ, ಅದು ಒಟಿಟಿಯಾಗಿರಬಹುದು, ಟೀವಿಯಾಗಿರಬಹುದು' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



# ತೆರೆ ಮೇಲೆ ಮತ್ತೆ ಶಿವಣ್ಣ– ಡಾಲಿ



'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಕವಲುದಾರಿ' ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾಗಳ ವಿಶಿಷ್ಟ ಕಥಾನಕಗಳ ಮೂಲಕ ಸಿನಿಪ್ರೇಮಿಗಳ ಮೆಚ್ಚುಗೆ ಗಳಿಸಿರುವ ನಿರ್ದೇಶಕ ಹೇಮಂತ್ ಎಂ. ರಾವ್ ದೊಡ್ಡ ಪ್ರಾಜೆಕ್ಟ್ ಘೋಷಣೆ ಮಾಡಿದ್ದಾರೆ.

'666 ಆಪರೇಷನ್ ಡ್ರೀಮ್ ಥಿಯೇಟರ್' ಎಂಬ ಚಿತ್ರ ನಿರ್ದೇಶಿಸುತ್ತಿದ್ದು, 70ರ ದಶಕದ ಶೈಲಿಯಲ್ಲಿ ಕಥೆಯನ್ನು ನಿರೂಪಿಸಲು ಮುಂದಾಗಿದ್ದಾರೆ.

ಸಿನಿಮಾದ ಟೈಟಲ್ ಹಾಗೂ ಕಥೆ ಒಂದು ಆಕರ್ಷಣೆಯಾದರೆ, ಮತ್ತೂ ಒಂದು ವಿಶೇಷ ಇರುವುದು ಕಾಸ್ಟಿಂಗ್‌ನಲ್ಲಿ. ಶಿವಣ್ಣ ಹಾಗೂ ಡಾಲಿ ಧನಂಜಯ್ ಕಾಂಬಿನೇಷನ್ ಈ ಸಿನಿಮಾದ ಹೈಲೈಟ್ ಆಗಿದ್ದು, ಇಬ್ಬರೂ ಒಟ್ಟಿಗೆ ನಟಿಸುತ್ತಿರುವ ನಾಲ್ಕನೇ ಸಿನಿಮಾ ಇದಾಗಲಿದೆ.

'ಟಗರು', 'ಬೈರಾಗಿ' ಸಿನಿಮಾದಲ್ಲಿ ಡಾಲಿ, ಶಿವಣ್ಣ ಇಬ್ಬರೂ ಒಟ್ಟಾಗಿ ನಟಿಸಿದ್ದರು. 'ಉತ್ತರಕಾಂಡ' ಸಿನಿಮಾದಲ್ಲಿಯೂ ಈ ಕಾಂಬಿನೇಷನ್ ಇದ್ದು, ಆ ಸಾಲಿಗೆ '666...' ಕೂಡ ಸೇರಿಕೊಂಡಿದೆ. ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾದಲ್ಲಿ ಡಾಲಿ, ಶಿವರಾಜಕುಮಾರ್ ನಟಿಸುತ್ತಿರುವುದಾಗಿ ತಿಳಿದುಬಂದಿದೆ.

ಈಚೆಗೆ 'ಭೈರವನ ಕೊನೇ ಪಾಠ' ಸಿನಿಮಾವನ್ನು ಹೇಮಂತ್ ಘೋಷಿಸಿದ್ದರು. ಅದರ ನಡುವೆಯೇ '666...' ಸಿನಿಮಾವನ್ನೂ ಕೈಗೆತ್ತಿಕೊಂಡಿದ್ದಾರೆ. ವೈಶಾಖ್ ಜೆ ಫಿಲ್ಮ್ಸ್ ಬ್ಯಾನರ್ ಅಡಿ ಸಿನಿಮಾ ಮೂಡಿಬರುತ್ತಿದ್ದು, ಚರಣ್ ರಾಜ್ ಸಂಗೀತ ಸಂಯೋಜನೆ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಮತ್ತು ವಿಶ್ವಾಸ್ ಕಾಶ್ಯಪ್ ಕಲಾ ನಿರ್ದೇಶನ ಈ ಚಿತ್ರಕ್ಕಿರಲಿದೆ.